ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

**ಪತ್ರಿಕಾ ತುಣುಕುಗಳು**

**PAPER CLIPPINGS**

15

ಇಲಾಖೆ / ವಿಷಯ : DEPARTMENT / SUBJECT: ಸಂತಾಪ

ಪತ್ರಿಕೆಯ ಹೆಸರು : NAME OF THE NEWS PAPER: ಪ್ರಜಾವಾಣಿ

ದಿನಾಂಕ : DATE : 20-12-2021

**ನಿಧನ ವಾರ್ತೆ** 7

## ಚಿತ್ರ ನಿರ್ದೇಶಕ ಬೂದಾಳ್ ಕೃಷ್ಣಮೂರ್ತಿ



ಬೆಂಗಳೂರು: ಚಿತ್ರನಿರ್ದೇಶಕ ಬೂದಾಳ್ ಕೃಷ್ಣಮೂರ್ತಿ (71) ಶನಿವಾರ ಬೆಂಗಳೂರಿನ ತಮ್ಮ ನಿವಾಸದಲ್ಲಿ ನಿಧನರಾದರು. ಕೆಲ ಕಾಲದಿಂದ ಅವರು ಅನಾರೋಗ್ಯಕ್ಕೊಳಗಾಗಿದ್ದರು.

ಹುಳಿಯಾರು ಸಮೀಪದ ಬೂದಾಳು ಅವರ ಹುಟ್ಟೂರು. ಪದವಿ ಪೂರ್ಣಗೊಳಿಸಿ ಬೆಂಗಳೂರಿಗೆ ಬಂದ ಕೃಷ್ಣಮೂರ್ತಿ ಅವರು ಸಿದ್ದಲಿಂಗಯ್ಯ ನಿರ್ದೇಶನದ 'ದೂರದ ಬೆಟ್ಟ' ಚಿತ್ರದಲ್ಲಿ ಅಪ್ರೆಂಟಿಸ್ ಆಗಿ ಸಿನಿಮಾರಂಗ ಪ್ರವೇಶಿಸಿದರು.

ಮುಂದೆ ಸಿದ್ದಲಿಂಗಯ್ಯ ಅವರ 'ಬೂತಯ್ಯನ ಮಗ ಅಯ್ಯು', 'ಹೇಮಾವತಿ' ಸೇರಿದಂತೆ ಹಲವು ಚಿತ್ರಗಳಿಗೆ ಸಹಾಯಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದರು.

'ಎರಡು ದಂಡೆಯ ಮೇಲೆ' ಅವರ ನಿರ್ದೇಶನದ ಮೊದಲ ಸಿನಿಮಾ. 'ಒಲವಿನ ಕಾಣಿಕೆ', 'ಸೀತಾ ಆಂಜನೇಯ', 'ಶುಭಲಗ್ನ', 'ಲಂಚಸಾಮ್ರಾಜ್ಯ' ಅವರ ನಿರ್ದೇಶನದ ಸಿನಿಮಾಗಳು. ಅವರ ನಿರ್ದೇಶನದ ಕೊನೆಯ ಸಿನಿಮಾ 'ಇದೊಳ್ಳೆ ಮಹಾಭಾರತ' ತೆರೆ ಕಾಣಬೇಕಿದೆ.

ತಮ್ಮ ನಿರ್ದೇಶನದ ಸಿನಿಮಾಗಳಿಗೆ ಅವರು ಹಾಡುಗಳನ್ನು ಬರೆದಿದ್ದರು. ನಟನೆಯಲ್ಲೂ ಸಕ್ರಿಯರಾಗಿದ್ದ ಕೃಷ್ಣಮೂರ್ತಿ ಸುಮಾರು 50ಕ್ಕೂ ಹೆಚ್ಚು ಸಿನಿಮಾಗಳಲ್ಲಿ ಅಭಿನಯಿಸಿದ್ದಾರೆ.

'ಪ್ರೊಫೆಸರ್', 'ಶ್ರೀಗಂಧ', 'ಅರಿಶಿನ ಕುಂಕುಮ', 'ಬಲ್ ನನ್ಮಗ', 'ಪ್ರಜಾಶಕ್ತಿ', 'ನಿರ್ಣಯ', 'ಆರ್ಯಭಟ' ಅವರು ನಟಿಸಿದ ಪ್ರಮುಖ ಚಿತ್ರಗಳು. ಕರ್ನಾಟಕ ಚಲನಚಿತ್ರ ನಿರ್ದೇಶಕರ ಸಂಘದಲ್ಲಿ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು.